ಸಿಸಿ ನಂಃ **1191/2024**
ಪಿ.<u>ಡಬ್ಲ್ಯೂಃ **1**</u>

ದಿನಾಂಕಃ **26-12-2025** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪೀಯ ಪರ ಶ್ರೀ ಸಿ ಎಸ್ ಎಂ ಪಿ ವಕೀಲರಿಂದಃ</u>

ನಾನು ಪಿ.ಯು.ಸಿ ವರೆಗೆ ಓದಿದ್ದೇನೆ. ನಾನು ಒಂದು ಅವದಿಗೆ ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದೆನು ಎಂದರೆ ಸರಿ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ ಎಂದರೆ ಸರಿ. ನಾನು ಗ್ರಾಮಸ್ಥರಿಗೆ ವಿದವಾ ವೇತನ ಹಾಗೂ ಕೃಷಿ ಸಾಲ ಪಡೆದುಕೊಳ್ಳಲು ಸಹಾಯ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ರೈತರಿಗೆ ಟ್ರಾಕ್ಟರ್ ಸಾಲ ಸಹ ಮಾಡಿಸಿ ಕೊಡುತ್ತೇನೆ ಎಂದರೆ ಸರಿಯಲ್ಲ.

2. ಆರೋಪಿ ತನ್ನ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುವುದಿಲ್ಲ ಎಂದರೆ ಸಾಕ್ಷಿ ಆತನೇ ನೋಡಿಕೊಳ್ಳುತ್ತಾನೆ ಎಂದು ನುಡಿಯುತ್ತಾರೆ. ಆರೋಪಿ ನನ್ನ ಬಾಲ್ಯದ ಸ್ನೇಹಿತ ಆಗಿರುತ್ತಾನೆ. ನಾವು ರೈತರಿಗೆ ಟ್ರಾಕ್ಟರ್ ಕೊಡಿಸಲು ಇಬ್ಬರು ಸೇರಿ ಓಡಾಡುತ್ತಿದ್ದೇವು ಎಂದರೆ ಸರಿಯಲ್ಲ. ನಮ್ಮ ನಡುವೆ ಸಾಲದ ಕರಾರು ಪತ್ರ ಆಗಿಲ್ಲ. ಆರೋಪಿ ನನ್ನ ಹತ್ತಿರ ಸಾಲ ಕೇಳುತ್ತಿದ್ದ ವಿಷಯವನ್ನು ನಾನು ಅವರ ತಾಯಿ ಅಥವಾ ಅಣ್ಣನಿಗೆ ತಿಳಿಸಿಲ್ಲ. ಸಾಲ ಪಡೆದುಕೊಳ್ಳಲು ಆರೋಪಿ ಒಬ್ಬರೇ ಬಂದಿದ್ದರು. ಆರೋಪಿಗೆ ಸಾಲ ನೀಡಿರುವ ದಿನಾಂಕವನ್ನು ನೀವು ನಿಮ್ಮ ಮನೆಯಲ್ಲಿ ಪುಸ್ತಕದಲ್ಲಿ ಬರೆದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ನಗದು ರೂಪದಲ್ಲಿ ಸಾಲ ನೀಡಿದ್ದೆನು. ಸಾಲ ನೀಡುವಾಗ ನನ್ನ ಮತ್ತು ಆರೋಪಿಯನ್ನು ಹೊರತು ಪಡಿಸಿ ಬೇರೆಯಾರು ಹಾಜರು ಇರಲಿಲ್ಲ. 2021 ರಲ್ಲಿ ಸಾಲ ನೀಡಿದ ನಂತರ ಆರೋಪಿಯನ್ನು ಮರುಪಾವತಿ ಮಾಡುವಂತೆ ಕೇಳಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

3. ನಿಪಿ-1 ಮತ್ತು 2 ರಲ್ಲಿ ಇರುವ ವಿವರಗಳನ್ನು ಆರೋಪಿ ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿಯೇ ಬರೆದಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿಗೆ ಸಾಲ ನೀಡಿದ 06 ತಿಂಗಳ ನಂತರ ಚೆಕ್ಕುಗಳನ್ನು ಪಡೆದುಕೊಂಡಿದ್ದೆನು. ಚೆಕ್ಕುಗಳಲ್ಲಿ ಆರೋಪಿಯೇ ದಿನಾಂಕ 01.02.2024 ಎಂದು ನಮೂದು ಮಾಡಿದ್ದನು. 06 ತಿಂಗಳ ಒಳಗಾಗಿ ಸಾಲ ಮರು ಪಾವತಿ ಮಾಡುವುದಾಗಿ ಹೇಳಿ ಹಣ ಪಡೆದುಕೊಂಡು 06 ತಿಂಗಳ ನಂತರ ಆರೋಪಿ ನನಗೆ ಚೆಕ್ಕುಗಳನ್ನು ಕೊಟ್ಟಿದ್ದರು. ದಿನಾಂಕ 25.12.2021 ರಂದು ಸಾಲ ನೀಡಿದ ನಂತರ ಆರೋಪಿ ಸಾಲ ಮರುಪಾವತಿಸದೇ ಮುಂದೂಡುತ್ತಾ ಹೋಗಿದ್ದು ನಂತರ ದಿಃ 01.02.2024 ರಂದು ನನಗೆ

ಚೆಕ್ಕುಗಳನ್ನು ಕೊಟ್ಟಿದ್ದರು. ಆರೋಪಿ ಸಾಲ ಮರುಪಾವತಿಗಾಗಿ ನನಗೆ ಚೆಕ್ಕುಗಳನ್ನು ಕೊಡುತ್ತಿರುವುದಾಗಿ ನಾನು ಆತನಿಂದ ಲಿಖಿತ ದಾಖಲೆ ಪಡೆದುಕೊಂಡಿಲ್ಲ. ಆರೋಪಿ ನನ್ನಿಂದ ಯಾವುದೇ ಸಾಲ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

4. 2021 ರಲ್ಲಿ ಆರೋಪಿಯ ಹೆಂಡತಿಯೂ ಸಹ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು ಎಂದರೆ ಸರಿ. ಆದ್ದರಿಂದ ನಾನು ಮತ್ತು ಆರೋಪಿ ಸೇರಿ ಸಣ್ಣ-ಪುಟ್ಟ ಕೆಲಸಗಳನ್ನು ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾವು ಗ್ರಾಮ ಹಾಗೂ ತಾಲೂಕ ಪಂಚಾಯಿತಿಯ ಸಣ್ಣ-ಪುಟ್ಟ ಗುತ್ತಿಗೆ ಕೆಲಸಗಳನ್ನು ಮಾಡಿಸುತ್ತಿದ್ದೆವು ಎಂದರೆ ಸರಿಯಲ್ಲ. ನಂತರ ಆರೋಪಿಗೆ ಜಮೀನು ಅಭಿವೃದ್ದಿ ಸಾಲ ಕೊಡಿಸುವುದಾಗಿ ಆತನಿಂದ ಚೆಕ್ ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ನಂತರ ನಮ್ಮ ನಡುವೆ ಕೆಲಸಕ್ಕೆ ಸಂಬಂಧಿಸಿದಂತೆ ವೈ ಮನಸ್ಸು ಬಂದಿರುತ್ತದೆ ಎಂದರೆ ಸರಿಯಲ್ಲ. ನಾನು ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಆತನ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

5. ಚೆಕ್ಕುಗಳಲ್ಲಿ ಇರುವ ವಿವರಗಳು ಬೇರೆ ಬೇರೆ ಕೈ ಬರಹದಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ಸರಿಯಲ್ಲ, ಆರೋಪಿಯೇ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿ ನನ್ನಿಂದ ಸಾಲ ಪಡೆದುಕೊಂಡಿಲ್ಲ ಹಾಗೂ ಸಾಲ ಮರುಪಾವತಿಗಾಗಿ ನನಗೆ ಚೆಕ್ಕನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಪಾವತಿಸಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ. ಬ್ಯಾಂಕಿನಿಂದ ಜಮೀನು ಅಭಿವೃದ್ದಿ ಸಾಲ ಕೊಡಿಸುವುದಾಗಿ ಹೇಳಿ ಆರೋಪಿಯಿಂದ ಚೆಕ್ ಪಡೆದು ನಾನು ಅದನ್ನು ದುರುಪಯೋಗ ಪಡಿಸಿಕೊಂಡಿದ್ದೇನೆಂದರೆ ಸರಿಯಲ್ಲ. ಈ ದಿನದ ವರೆಗೆ ಆರೋಪಿಯ ಚೆಕ್ ಪುಸ್ತಕ ನನ್ನ ಮನೆಯಲ್ಲಿಯೆ ಇದೆ ಎಂದರೆ ಸರಿಯಲ್ಲ. ಆರೋಪಿ ನನ್ನ ಮೇಲೆ ಇಟ್ಟಿರುವ ಸ್ನೇಹ ವಿಶ್ವಾಸವನ್ನು ನಾನು ದುರುಪಯೋಗ ಪಡಿಸಿಕೊಂಡಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ